

# ತರ್ಕದ ಪಟಾಕಿ ಮಕ್ಕಳಿಗೆ ಬೇಡ

**ಪಟಾಕಿ ಹೊಡೆಯಬೇಕೆ ಬೇಡವೆ ಎನ್ನುವ ಚರ್ಚೆ ಮಕ್ಕಳಿಗೆ ಏನನ್ನು ಕಲಿಸಿಕೊಟ್ಟಿತು. ನಾವು ವಾಸಿಸುವ ವಾತಾವರಣವನ್ನು ಸ್ವಸ್ಥವಾಗಿ ಇಟ್ಟುಕೊಳ್ಳಬೇಕು ಎನ್ನುವ ತಿಳಿವಳಿಕೆಯನ್ನಂತೂ ಅಲ್ಲ.**

■ ಸ್ವಯಂಪ್ರಭಾ

ಹಗ್ಗವನ್ನು ಹುರಿ ಮಾಡುವಾಗ, ಅಥವಾ ಭತ್ತದ ಹುಲ್ಲಿನಲ್ಲಿ ಹಗ್ಗವನ್ನು ಮಾಡುವಾಗ, ಮೊದಲು ಹುಲ್ಲು ಅಥವಾ ತೆಂಗಿನ ನಾರನ್ನು ಸ್ವಚ್ಛ ಮಾಡಿಕೊಳ್ಳಬೇಕು. ಚಿಕ್ಕಪುಟ್ಟ ಕಸದಂತಹ ನಾರುಗಳು, ಅಥವಾ ಇತರ ಕಸಗಳು ಸೇರಿಕೊಳ್ಳದಂತೆ ಗಮನಿಸುವುದು ಅಗತ್ಯ. ಹಾಗೆ ಬಿಗಿದು ಮಾಡಿದ ಹಗ್ಗಗಳು ಗಟ್ಟಿಯಾಗಿ, ಚೆನ್ನಾಗಿ ಬಾಳಿಕೆ ಬರುತ್ತವೆ. ಹುರಿಹಗ್ಗಗಳ ನೇಯ್ಗೆಯನ್ನು ನೋಡಿದಾಗೆಲ್ಲ ತರ್ಕದ ನೆನಪಾಗುತ್ತದೆ.

'ತರ್ಕವೇ ಜೀವನ' ಎನ್ನುವುದು ಸರಿ ಅಲ್ಲದೇ ಇದ್ದರೂ, ಜೀವನ ನಿರ್ವಹಿಸಲು ತಕ್ಕಮಟ್ಟಿಗೆ ತರ್ಕದ ಅವಶ್ಯಕತೆ ಇದ್ದೇ ಇದೆ. ನಮ್ಮ ಪ್ರತಿಯೊಂದು ನಡೆಗೂ ಒಂದು ತರ್ಕ ಇದ್ದೇ ಇರುತ್ತದೆ ಮತ್ತು ಅದನ್ನು ಮಕ್ಕಳು ಸೂಕ್ಷ್ಮವಾಗಿ ಗಮನಿಸುತ್ತ, ತಾವೂ ಅದೇ ತರ್ಕದ ಏಣಿಯನ್ನು ಏರುತ್ತ, ಸ್ವಂತವಾಗಿ ಯೋಚಿಸುವುದನ್ನು ಕಲಿಯುತ್ತಾರೆ.

ಇತ್ತೀಚೆಗೆ ದೀಪಾವಳಿ ಸಂದರ್ಭದಲ್ಲಿ ಪಟಾಕಿ ಹಚ್ಚಬೇಕೋ ಬೇಡವೋ ಎಂಬ ಬಗ್ಗೆ ಭಾರೀ ಪರ ವಿರೋಧ ಚರ್ಚೆಗಳು ನಡೆದವು. ಈ ಪಟಾಕಿ ವಿಚಾರ ಸಾಮಾನ್ಯವಾಗಿ ಮಕ್ಕಳಿಗೆ ಹೆಚ್ಚು ಪ್ರಿಯ. ಅಥವಾ 'ಮಕ್ಕಳಿಗೆ ಇದು ಪ್ರಿಯ' ಎಂದು ಅವರನ್ನು ಮುಂದೆ ನಿಲ್ಲಿಸಿ, ಅವರ ಮರೆಯಲ್ಲಿ ದೊಡ್ಡವರೇ ಪಟಾಕಿ ಸಿಡಿಸಿ ಆನಂದಿಸುತ್ತಾರೇನೋ?

ಪ್ರತಿ ವರ್ಷ ಪಟಾಕಿಯಿಂದ ಆಗುವ ಮಾಲಿನ್ಯದ ಬಗ್ಗೆ ಚರ್ಚೆಗಳು ನಡೆಯುತ್ತವೆ. 'ಇನ್ನು ಮುಂದೆ ನಾವು ಪಟಾಕಿ ತರುವುದಿಲ್ಲ' ಎಂದು ಪ್ರತಿ ವರ್ಷ ಕೆಲವು ಮನೆಗಳಲ್ಲಿ ಸಂಕಲ್ಪ ಮಾಡುವುದುಂಟು. ಮಕ್ಕಳ ಸಂಕಲ್ಪಗಳು ಎಷ್ಟೊಂದು ಸುಂದರವಾಗಿರುತ್ತವೆ ! ಪಟಾಕಿ ಸದ್ದಿಗೆ ಓಡಿ ದೂರ ಹೋಗುವ ನಾಯಿ, ಹಕ್ಕಿಗಳು ಚಿಲಿಪಿಲಿಗುಟ್ಟುತ್ತಾ ಓಡುವುದು ಮತ್ತು ಕೆಲವೆಡೆ ಶಬ್ದವನ್ನು ತಾಳಲಾರದೇ ಪುಟ್ಟ ಹಕ್ಕಿಗಳು ಸತ್ತು ಬೀಳುವುದು, ಹೊಗೆಯ ಭರಾಟೆಯಲ್ಲಿ ಉಸಿರಾಡಲು ಕಷ್ಟಪಡುವ ಸ್ನೇಹಿತೆಯ ನೋವು ಹೀಗೆ ಮಕ್ಕಳು ವಾಸ್ತವ ದೃಶ್ಯಗಳನ್ನು ನೋಡಿಯೇ ನೋಡುತ್ತಾರೆ. ಅವೆಲ್ಲವೂ ಅವರ ಮನಸ್ಸಿನಲ್ಲಿ ಧೋರಣೆಯೊಂದು ರೂಪುತಳೆಯುವಂತೆ ಮಾಡುತ್ತವೆ. ಈ ವರ್ಷ, ಸಾಧ್ಯವಾಗದೇ ಇದ್ದರೂ, ಮುಂದಿನ ವರ್ಷದ ವೇಳೆಗೆ ಈ ಧೋರಣೆಯು ಹೆಪ್ಪುಗಟ್ಟಿ ನಿರ್ಣಯ ರೂಪಕ್ಕೆ ಬರಬಹುದು. ಆದರೆ ಇಂತಹ ಯೋಚನೆಗಳ ಚಿಗುರನ್ನೇ ಮುರುಟಿ ಹಾಕುವ ಪ್ರಯತ್ನಗಳನ್ನೂ ದೊಡ್ಡವರೇ ಮಾಡುವುದನ್ನು ಕಂಡು ಬೇಸರವಾಗುತ್ತದೆ.

ಪ್ರಸಕ್ತ ಕೊರೊನಾ ಸಂದರ್ಭದಲ್ಲಿ ಪಟಾಕಿ ನಿಷೇಧದ ಬಗ್ಗೆ ಸರ್ಕಾರಿ ಮಟ್ಟದಲ್ಲಿ ಸಾಕಷ್ಟು ಚರ್ಚೆ ನಡೆಯಿತು. ಎಲ್ಲವೂ ವ್ಯರ್ಥ ಚರ್ಚೆಯೇ ಆಗಿಹೋಯಿತು. ಈ ಎಲ್ಲ ಆಗುಹೋಗುಗಳ ನಡುವೆ, ಕುತರ್ಕದ ಕಪ್ಪು ಹೊಗೆಯೊಂದು ನುಸುಳಿ ಬಂದು ಮಕ್ಕಳ ಮೈಮನಸ್ಸನ್ನು ಕಪ್ಪಾಗಿಸಲು ಯತ್ನಿಸಿದೆ. ಅದು ಮತಧರ್ಮದ ಹೊಗೆ. 'ಪಟಾಕಿ ಸಿಡಿಸಿ ನಮ್ಮ ಧರ್ಮದ ಹಬ್ಬದ ಆಚರಣೆ ಮಾಡುವುದಕ್ಕೆ ಯಾಕೆ ವಿರೋಧ?' ಎಂಬ ಪ್ರಶ್ನೆಯು ನಿಜಕ್ಕೂ ಮಕ್ಕಳ ಆರೋಗ್ಯಕರ ತರ್ಕ ಸಾಮರ್ಥ್ಯದ ಬೆಳವಣಿಗೆಯ ಮೇಲೆ ಕೆಟ್ಟ ಪ್ರಭಾವ ಬೀರುತ್ತದೆ. 'ನೋವಿನ ಸಂದರ್ಭದಲ್ಲಿ ಹೀಗೂ ತರ್ಕ ಮಾಡಬಹುದು' ಎಂಬುದಾಗಿ ಯೋಚಿಸಲು ಅವರನ್ನು ಪ್ರೇರೇಪಿಸುತ್ತದೆ. ಈ ಧೋರಣೆಯು ಮುಂದಿನ ಸಮಾಜಕ್ಕೆ ಖಂಡಿತಾ ಒಳಿತನ್ನು ಮಾಡುವುದಿಲ್ಲ. ಸಮಾಜದ ಮಾತು ಹಾಗಿರಲಿ, ಮಕ್ಕಳ ಮನದಲ್ಲಿ ಕುತರ್ಕದ ಧೋರಣೆ ಬೆಳೆದರೆ, ಅದು ನಾಳೆ ನಮ್ಮ ಮನೆಯ ವಾತಾವರಣವನ್ನೂ ಕೆಡಿಸುತ್ತದೆ, ಸಂಬಂಧಗಳ ನಡುವೆ ಬಿರುಕು ಮೂಡಿಸುತ್ತದೆ. ಇಷ್ಟಕ್ಕೂ ಪಟಾಕಿ ಬದುಕಿನ ಅನಿವಾರ್ಯತೆಯೇ ಅಲ್ಲ. ಅನಿವಾರ್ಯವಲ್ಲದ ವಿಚಾರಗಳಿಗೆ, ದೊಡ್ಡವರು ಹೀಗೆ ಕುತರ್ಕ ಮಾಡುವುದನ್ನು ಮಕ್ಕಳೂ ಗಮನಿಸುತ್ತಾರಲ್ಲ!

ಯಾವುದೇ ವಿಚಾರವಾಗಲೀ, ವಾದ–ತರ್ಕಗಳು ಸ್ವಚ್ಛವಾಗಿದ್ದಷ್ಟೂ ಮುಂದಿನ ದಿನಗಳು ಸುಂದರವಾಗಿರುತ್ತವೆ. ಮನೆಯ ಒಳಗಿನ ವಾತಾವರಣವೂ ಮನೆಯ ಹೊರಗಿನ ವಾತಾವರಣವೂ ಹಿತವಾಗಿರುತ್ತದೆ.

'ಕಾಲ ಕೆಟ್ಟಿದೆ, ಸಮಾಜ ಈಗೀಗ ಭಾರೀ ಹಾಳಾಗಿದೆ' ಎಂಬೆಲ್ಲ ವಾದಗಳು ಹತಾಶೆ ಮತ್ತು ಸಿನಿಕತೆಯ ಹೇಳಿಕೆಗಳಂತೆ ಭಾಸವಾಗುತ್ತವೆ. ಹಿಂದಿನ ತಲೆಮಾರಿನ ಆಶಯಕ್ಕೆ ತಕ್ಕಂತೆ ಇಂದಿನ ತಲೆಮಾರು ರೂಪುಗೊಳ್ಳುತ್ತದೆ. ಅಂದಮೇಲೆ ನಾಳಿನ ಸಮಾಜವನ್ನು ಸೃಷ್ಟಿಸುವ ಅವಕಾಶ ಈಗ ನಮ್ಮ ಕೈಯಲ್ಲೇ ಇದೆ. ಉತ್ತಮ ಸಮಾಜದ ನೇಯ್ಗೆಯನ್ನು ಪ್ರತಿಯೊಬ್ಬರೂ ಸೇರಿ ಮಾಡಬೇಕಾಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in